**ದಿನಾಂಕ: 04.09.2021 ರಂದು ವಾರ್ಡ್ ಸಂಖ್ಯೆ 184 ಉತ್ತರಹಳ್ಳಿ ವಾರ್ಡ್ ಕಛೇರಿಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡಾವಳಿಗಳು.**

***ಹಾಜರಿದ್ದ ಅಧಿಕಾರಿಗಳು:-***

1. ಶ್ರೀ ಡಿ.ಸುಂದರಯ್ಯ- ವಾರ್ಡ್ ಸಮಿತಿ ನೋಡಲ್ ಅಧಿಕಾರಿ
2. ಶ್ರೀ ವೆಂಕಟರಮಣ.ಕೆ.ವಿ - ಸಹಾಯಕ ಅಭಿಯಂತರರು ಮತ್ತು ಸಂಚಾಲಕರು (ವಾರ್ಡ್ 184ಉತ್ತರಹಳ್ಳಿ)
3. ಡಾ// ದೀಕ್ಷಿತ - ಕೋವಿಡ್-19 ಆರೋಗ್ಯ ವೈದ್ಯಾಧಿಕಾರಿಗಳು, ಬೆಂಗಳೂರು ದಕ್ಷಿಣ ವಿಭ
4. ಶ್ರೀಮತಿ ರೇಷ್ಮಾ - ಸಹಾಯಕ ಅಭಿಯಂತರರು, ಬೃಹತ್ ಮಳೆ ನೀರು ಗಾಲುವೆ, ಬೊಮ್ಮನಹಳ್ಳಿ
5. ಶ್ರೀ ನಿರ್ಮಲಾ.ವೈ.ಎನ್ - ಸಹಾಯಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆ
6. ಶ್ರೀ ಶಶಿಕುಮಾರ್ - ಹಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್ ಸಂಖ್ಯೆ 184
7. ಶ್ರೀ ವೆಂಕಟೇಶ್.ಕೆ - ಮೇಲ್ವಿಚಾರಕರು, ಘನತ್ಯಾಜ್ಯ ನಿರ್ವಹಣೆ
8. ಶ್ರೀ ಮೋಸಿಸ್ - ಮೇಲ್ವಿಚಾರಕರು, ಘನತ್ಯಾಜ್ಯ ನಿರ್ವಹಣೆ
9. ಶ್ರೀ ಶಿವರಾಜು - ಮೇಲ್ವಿಚಾರಕರು, ಘನತ್ಯಾಜ್ಯ ನಿರ್ವಹಣೆ
10. ಶ್ರೀ ಸಿದ್ದರಾಜು - ಮೇಲ್ವಿಚಾರಕರು, ಬೀದಿ ದೀಪಗಳು, ಬಿ.ಬಿ.ಎಂ.ಪಿ

***ಹಾಜರಿದ್ದ ಸಮಿತಿ ಸದಸ್ಯರು:-***

1. ಶ್ರೀ ಮೃತ್ಯುಂಜಯ.ಎಂ.ಎಸ್ – ಹನುಮಹಿಲ್ಸ್ ಬಡಾವಣೆRWA
2. ಶ್ರೀ ಅರುಣ್ – ಎ.ಜಿ.ಎಸ್ ಬಡಾವಣೆ RWA
3. ಶ್ರೀ ಅಮರ್.ಎಂ.ಆರ್ - ಎ.ಜಿ.ಎಸ್ ಬಡಾವಣೆ RWA
4. ಶ್ರೀ ಎಸ್.ಕೆ.ವಿ ಪ್ರಸಾದ್ – ಮಂತ್ರಿ ಟ್ರ್ಯಾಂಕ್ವಿಲ್ RWA

ಮೇಲೆ ಹಾಜರಿದ್ದ ಸಮಿತಿ ಸದಸ್ಯರ ಹಾಗೂ ಅಧಿಕಾರಿಗಳ ಸಮ್ಮುಖದಲ್ಲಿ ವಾರ್ಡ್ ಸಮಿತಿ ನೋಡಲ್ ಅಧಿಕಾರಿಯಾದ ಶ್ರೀ ಡಿ.ಸುಂದರಯ್ಯ ರವರು ಸಭೆಯನ್ನುದ್ದೇಶಿಸಿ ಮಾತನಾಡುತ್ತಾ, ಸಭೆ ಸೇರಿರುವ ಉದ್ದೇಶ ಮತ್ತು ಸಭೆಯ ಮಹತ್ವವನ್ನು, ಸದಸ್ಯರ ಮುಖ ಪರಿಚಯದೊಂದಿಗೆ ವಿವರಿಸುತ್ತಾ, ಹಾಜರಿದ್ದ ಸದಸ್ಯರಿಗೆ ಹಾಗೂ ಅಧಿಕಾರಿಗಳಿಗೆ ಸ್ವಾಗತ ಕೋರಿದರು.

ಸದರಿ ಸಭೆಯಲ್ಲಿ ಈ ಕೆಳಕಂಡಂತೆ ವಿವಿಧ ವಿಷಯಗಳ ಬಗ್ಗೆ ವಾರ್ಡ್ ಸಮಿತಿಯು ವಿವರವಾಗಿ ಚರ್ಚಿಸಿದಂತೆ ಮುಂದಿನ ಕ್ರಮ ಕೈಗೊಳ್ಳಲು ಸಂಬಂಧಪಟ್ಟ ಅಧಿಕಾರಿ / ಇಲಾಖೆಗಳಿಗೆ ಸೂಚಿಸಲಾಗಿರುತ್ತದೆ.

1. **ಬೆಂಗಳೂರು ನೀರು ಮತ್ತು ಒಳಚರಂಡಿ ಇಲಾಖೆಗೆ ಸಂಬಂಧಪಟ್ಟಂತೆ**

   - ಉತ್ತರಹಳ್ಳಿ ಸುತ್ತಮುತ್ತಲಿನ ಒಳಚರಂಡಿಗಳನ್ನು ಶುದ್ದ ಪಡಿಸಿ ನಿರ್ವಹಣೆ ಮಾಡಲು ಕೋರಿರುತ್ತಾರೆ.
   - ಹೆಚ್.ಎಂ.ಲೇಔಟ್‌ನಲ್ಲಿ ಸ್ಯಾನಿಟರಿ ಮ್ಯಾನ್ ಹೋಲ್‌ಗಳನ್ನು ಹೆಚ್ಚುಗೊಳಿಸಲು ಕೋರಿರುತ್ತಾರೆ.
   - ಎಜಿಎಸ್ ಲೇಔಟ್ 15, 16, 17ನೇ ಮುಖ್ಯರಸ್ತೆಗಳಲ್ಲಿ ಪಿವಿಸಿ ಪೈಪ್‌ಗಳನ್ನು ತೆರವುಗೊಳಿಸಿ ಡಿವಿಸಿ ಪೈಪ್‌ಗಳನ್ನು ಅಳವಡಿಸಲು ಕೋರಿರುತ್ತಾರೆ.
   - ಹೆಚ್.ಎಂ.ಎಸ್ ಲೇಔಟ್ ತಗ್ಗು ಪ್ರದೇಶವಾಗಿದ್ದು ಇಲ್ಲಿನ ನಿವಾಸಿಗಳ ಮನೆಗಳಿಗೆ ಒಳಚರಂಡಿ ನೀರು ನುಗ್ಗುತ್ತಿರುವ ಬಗ್ಗೆ ತಿಳಿಸಿರುತ್ತಾರೆ.
   - ಎಜಿಎಸ್ ಲೇಔಟ್‌ನಲ್ಲಿನ ಪೈಪ್‌ಲೈನ್ ಅನ್ನು ತೆರವುಗೊಳಿಸಿದ ನಂತರ ಮರು ಡಾಂಬರು ಮಾಡಲು ಕೋರಿರುತ್ತಾರೆ.

- ಮಂತ್ರಿ ಟ್ರಾಂಕ್ವಿಲ್ ಮುಖ್ಯರಸ್ತೆಗೆ ದಿ:20.09.2021ರ ಒಳಗೆ ಉಳಿಕೆ ಮಾಡಬೇಕಾಗಿರುವ ನೀರು ಮತ್ತು ಒಳಚರಂಡಿ ಸಂಪರ್ಕ ಕಾಮಗಾರಿಯನ್ನು ಪೂರ್ಣಗೊಳಿಸಲು ತಿಳಿಸಿರುತ್ತಾರೆ.
- ಎಜಿಎಸ್ ಲೇಔಟ್‌ನ 20 & 21ನೇ ಕ್ರಾಸ್ ರೋಡ್‌ಗಳನ್ನು ಬೆಸ್ಕಾಂ ರವರು ಕೇಬಲ್ ಅಳವಡಿಸಲು ರಸ್ತೆಯನ್ನು ಕತ್ತರಿಸುವಾಗ ಒಳಚರಂಡಿ ಪೈಪ್ ಅನ್ನು ಒಡೆದು ಹಾಕಿರುವುದರಿಂದ ಸದರಿ ಜಾಗದಿಂದ ಒಳಚರಂಡಿ ನೀರು ಹರಿದು ಬರುತ್ತಿದ್ದು ಇದನ್ನು ಸರಿಪಡಿಸಿಕೊಡಲು ಕೋರಿರುತ್ತಾರೆ.

ಈ ಬಗ್ಗೆ ಮೇಲಿನ ಎಲ್ಲಾ ಅಂಶಗಳಿಗೆ ಕ್ರಮ ಕೈಗೊಳ್ಳಲು ಮಾನ್ಯ ನೋಡಲ್ ಅಧಿಕಾರಿ ರವರು ಸಂಬಂಧಪಟ್ಟ ಸಹಾಯಕ ಕಾರ್ಯಪಾಲಕ ಅಭಿಯಂತರರು ಬೆಂಗಳೂರು ಕುಡಿಯುವ ನೀರು ಮತ್ತು ಒಳಚರಂಡಿ ಮಂಡಳಿ ರವರಿಗೆ ಸೂಚಿಸಿರುತ್ತಾರೆ.

2. **ಬೆಸ್ಕಾಂ ಇಲಾಖೆಗೆ ಸಂಬಂಧಪಟ್ಟಂತೆ.**

- ಉತ್ತರಹಳ್ಳಿ ವಾರ್ಡ್ ವ್ಯಾಪ್ತಿಯಲ್ಲಿ ಕೇಬಲ್ ಅಳವಡಿಸಲು ಅಗೆದಿರುವ ರಸ್ತೆಗೆ ಮರು ಡಾಂಬರೀಕರಣ ಮಾಡಲು ಕೋರಿರುತ್ತಾರೆ.
- ಕೇಬಲ್ ಚೇಂಬರ್ ರಸ್ತೆ ಮಟ್ಟಕ್ಕಿಂತ ಎತ್ತರವಾಗಿದ್ದು, ಅದನ್ನು ರಸ್ತೆ ಮಟ್ಟಕ್ಕೆ ಇಳಿಸಲು ಕೋರಿರುತ್ತಾರೆ.

ಈ ಮೇಲಿನ ಎಲ್ಲಾ ಅಂಶಗಳಿಗೆ ಕ್ರಮ ಕೈಗೊಳ್ಳಲು ಮಾನ್ಯ ನೋಡಲ್ ಅಧಿಕಾರಿ ರವರು ಸಂಬಂಧಪಟ್ಟ ಸಹಾಯಕ ಕಾರ್ಯಪಾಲಕ ಅಭಿಯಂತರರು ಬೆಸ್ಕಾಂ ಇಲಾಖೆ ರವರಿಗೆ ಸೂಚಿಸಿರುತ್ತಾರೆ.

3. **ಕೋವಿಡ್–19ಗೆ ಸಂಬಂಧಪಟ್ಟಂತೆ.**

- ಬೆಡ್ ಟ್ರೇಟೆಡ್ ಪೇಷೆಂಟ್‌ಗಳಿಗೆ ಕೋವಿಡ್–19 ವ್ಯಾಕ್ಸಿನೇಷನ್ ಅನ್ನು ಆಕಲು ಮನೆಗೆ ಬಂದು ಕೋವಿಡ್ ಲಸಿಕೆ ಹಾಕಲು ಕೋರಿರುತ್ತಾರೆ.

4. **ಬೀದಿ ದೀಪಗಳಿಗೆ ಸಂಬಂಧಪಟ್ಟಂತೆ**

- ವಾರ್ಡ್ ವ್ಯಾಪ್ತಿಯಲ್ಲಿ ಬರುವ ಬೀದಿ ದೀಪಗಳನ್ನು ಎಲ್.ಇ.ಡಿ ಲೈಟ್ ಬದಲಾಯಿಸಲು ಕೋರಿರುತ್ತಾರೆ.
- ಬೀದಿ ದೀಪಗಳ ನಿರ್ವಹಣೆಗಾರರನ್ನು ಹೆಚ್ಚಿಸಲು ಕೋರಿರುತ್ತಾರೆ.

ಈ ಮೇಲಿನ ಎಲ್ಲಾ ಅಂಶಗಳಿಗೆ ಕ್ರಮ ಕೈಗೊಳ್ಳಲು ಮಾನ್ಯ ನೋಡಲ್ ಅಧಿಕಾರಿ ರವರು ಸಹಾಯಕ ಕಾರ್ಯಪಾಲಕ ಬೀದಿ ದೀಪ ರವರಿಗೆ ಸೂಚಿಸಿರುತ್ತಾರೆ.

5. **ಬೃಹತ್ ನೀರುಗಾಲುವೆ ಇಲಾಖೆಗೆ ಸಂಬಂಧಪಟ್ಟಂತೆ**

- ಎಜಿಎಸ್ ಲೇಔಟ್ 3ನೇ ಮುಖ್ಯರಸ್ತೆಯಲ್ಲಿ ಬರುವ ಕಲ್ವರ್ಟ್ ಅನ್ನು ಪೂರ್ಣಗೊಳಿಸಲು ಕೋರಿರುತ್ತಾರೆ.

6. **ಸ.ಕಾ.ನಿ.ಅ ಉತ್ತರಹಳ್ಳಿ ಉಪವಿಭಾಗಕ್ಕೆ ಸಂಬಂಧಪಟ್ಟಂತೆ**

- 1ನೇ ಮುಖ್ಯರಸ್ತೆಯಿಂದ 6ನೇ ಮುಖ್ಯರಸ್ತೆಯವರೆಗೆ ನಂದಕುಮಾರ್ ಬಡಾವಣೆಯಲ್ಲಿ ರಸ್ತೆ ಬದಿಯಲ್ಲಿರುವ ಚರಂಡಿಗಳ ಹೂಳನ್ನು ತೆರವುಗೊಳಿಸಲು ಕೋರಿರುತ್ತಾರೆ.
- ಎ.ಜಿ.ಎಸ್ ಬಡಾವಣೆ, ಹನುಮಹಿಲ್ಸ್ ಬಡಾವಣೆ ಹಾಗೂ ನಂದಕುಮಾರ್ ಬಡಾವಣೆ ಸುತ್ತಮುತ್ತಲಿನ ಎಲ್ಲಾ ರಸ್ತೆಯಲ್ಲಿ ರಸ್ತೆ ಗುಂಡಿಗಳನ್ನು ಮುಚ್ಚಲು ಕೋರಿರುತ್ತಾರೆ.
- ಮಂತ್ರಿ ಟ್ರಾಂಕ್ವಿಲ್ ಮುಖ್ಯರಸ್ತೆಯಲ್ಲಿ ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆಯವರ ಕೆಲಸ ಮುಗಿದ ನಂತರ ವಾಹನ ಸುಗಮ ಸಂಚಾರಕ್ಕಾಗಿ ರಸ್ತೆಯಲ್ಲಿ ವೆಟ್‌ಮಿಕ್ಸ್ ಹಾಕಲು ಕೋರಿರುತ್ತಾರೆ.
- 2021–22 ಆಯವ್ಯಯದ ಹಂಚಿಕೆಯಾಗಿರುವ ಬಗ್ಗೆ.

2021–22ನೇ ಸಾಲಿನ ಬಿಬಿಎಂಪಿ ಆಯವ್ಯಯದಲ್ಲಿ ವಾರ್ಡ್ ಸಂಖ್ಯೆ 184 ಉತ್ತರಹಳ್ಳಿ ವಾರ್ಡ್ ವ್ಯಾಪ್ತಿಗೆ 108.06 ಲಕ್ಷಗಳ ಅನುದಾನ ದೊರೆತಿರುವುದಾಗಿ ಸಹಾಯಕ ಅಭಿಯಂತರರು ಸಭೆಗೆ ತಿಳಿಸಿದ್ದು, ಸದರಿ ಅನುದಾನದಲ್ಲಿ ಈ ಕೆಳಕಂಡ ಕಾಮಗಾರಿಗಳನ್ನು ಕೈಗೊಳ್ಳಲು ಸಭೆಯ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

ಕಾಮಗಾರಿಗಳ ವಿವರ

1. Filling of Potholes in Ward No 184 Uttarahalli Est Cost: 20.00 Lakhs
2. Annual Maintenance of Borewells and water supply through tankers in Ward No 184 Est Cost: 20.00 Lakhs
3. Providing and Maintenance of UGD Lines in Ward No 184 Est Cost: 25.00 Lakhs
4. Repairs and maintenance of Roads and footpath in Ward No 184 Est Cost: 20.00 Lakhs
5. Reasphalting of Roads in Ward No 184 Uttarahalli Est Cost: 8.06 Lakhs
6. Desilting of Drains and Re – Construction of Culverts in Ward No 184 Uttarahalli Est Cost: 15.00 Lakhs

ಈ ಎಲ್ಲಾ ವಿಷಯದ ಬಗ್ಗೆ ಚರ್ಚಿಸಲಾಗಿ ಸೂಕ್ತ ಕ್ರಮ ಕೈಗೊಳ್ಳುವ ನಿರೀಕ್ಷಣೆಯೊಂದಿಗೆ ಸಮಿತಿಯ ಅಧ್ಯಕ್ಷರಾದ ಶ್ರೀ ಡಿ.ಸುಂದರಯ್ಯ ರವರು ಎಲ್ಲರಿಗೂ ವಂದನೆಗಳನ್ನು ಕೋರುತ್ತಾ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಶ್ರೀ ಡಿ.ಸುಂದರಯ್ಯ
ನೋಡಲ್ ಅಧಿಕಾರಿ ಹಾಗೂ ಸ.ಕಾ.ನಿ.ಅ
ಅಂಜನಾಪುರ ಉಪವಿಭಾಗ

ಶ್ರೀ ವೆಂಕಟರಮಣ.ಕೆ.ವಿ
ಸಂಚಾಲಕರು ಹಾಗೂ ಸ.ಅ–184